(3) ಬೆಂಗಳೂರು ನಗರದ ತಿಲಕ್ ನಗರ ಬಡಾವಣೆಯಲ್ಲಿ ಸಾಗರ್ ಅಪೊಲೊ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿರುವ ಲೋಟಸ್ ಲ್ಯಾಬೋರೇಟರಿಗಳನ್ನು ಹಣದ ಆಮಿಷ ತೋರಿಸಿ ವಂಚಿಸುತ್ತಿರುವ ಬಗ್ಗೆ

ಶ್ರೀ ಬಿ ಆರ್ ಪಾಟೀಲ್ (ಆಳಂದ್) ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ತಿಲಕ್‌ನಗರ ಈ ಒಂದು ಬಡಾವಣೆಯಲ್ಲಿ ಸಾಗರ್ ಅಪೊಲೊ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿ ಲೋಟಸ್ ಲ್ಯಾಬೊರೇಟರಿ ಇವೆರಡೂ ಬಹು ರಾಷ್ಟ್ರೀಯ ಕಂಪನಿಗಳ ಸಂಸ್ಥೆಗಳು ಇವರು ಪತ್ರಿಕೆಗಳಲ್ಲಿ ಜಾಹಿರಾತನ್ನು ಕೊಟ್ಟು 18 ರಿಂದ 45 ವರ್ಷದ ಯುವಕರಿಗೆ ನಿಮಗೆ ದುಡ್ಡನ್ನು ಕೊಡುತ್ತೇವೆ, ನೀವು ನಮ್ಮ ಕಡೆ ಚಿಕಿತ್ಸೆಗೆ ಬರಬೇಕೆಂದು ಹೇಳಿ ಅವರ ಮೇಲೆ ಒಂದು ವಿಷಪೂರಿತವಾದ ಒಂದು ಪ್ರಯೋಗವನ್ನು ಮಾಡುತ್ತಿದ್ದಾರೆ ಆ ಯುವಕರನ್ನು ಅವರು ಪಶುಗಳ ತರಹ ವರ್ತನೆ ಮಾಡುತ್ತಿದ್ದಾರೆ ಹಾಗಾಗಿ ಇವತ್ತು ಸರ್ಕಾರದ ಯಾವುದೇ ಮನ್ನಣೆ ಇಲ್ಲದೆ ಸರ್ಕಾರಕ್ಕೆ ಯಾವುದೂ ಗೊತ್ತಿಲ್ಲದೆ, ಸರ್ಕಾದ ಮಾನ್ಯತೆ ಇಲ್ಲದೆ ಈ ಒಂದು ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ಬಡದೇಶದ ಮೇಲೆ ಇಲ್ಲಿನ ನಿರುದ್ಯೋಗಿ ಯುವಕರಿಗೆ ಆಸೆಯನ್ನು ತೋರಿಸಿ ಅವರಿಗೆ ನಾಲ್ಕು-ಐದು ಸಾವಿರ ರೂಪಾಯಿಗಳನ್ನು ಕೊಟ್ಟು ಅವರನ್ನು ಪ್ರಯೋಗದ ಪಶುಗಳನ್ನಾಗಿ ಮಾಡುತ್ತಿದ್ದಾರೆ ಇದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಹೀಗಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಹಳ ಒಂದು ದೊಡ್ಡ ಲೇಖನ ಬಂದಿದೆ ಹಾಗಾಗಿ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ತಕ್ಷಣ ಯುವಕರನ್ನು ಪ್ರಯೋಗಪಶುಗಳನ್ನಾಗಿ ಮಾಡುತ್ತಿರುವ ಬಹು ರಾಷ್ಟ್ರೀಯ ಕಂಪನಿಗಳ ಈ ವರ್ತನೆಯನ್ನು ನಿಲ್ಲಿಸಬೇಕು ಮತ್ತು ಈ ಯುವಕರ ಶೋಷಣೆಯನ್ನು ನಿಲ್ಲಿಸಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ ಇದು ಬಹಳ ಗಂಭೀರವಾದ ವಿಷಯ ಇಲ್ಲದಿದ್ದರೆ ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ದೇಶದಲ್ಲಿರುವ ಬಡತನವನ್ನು ದುರುಪಯೋಗಪಡಿಸಿಕೊಂಡು ನಮ್ಮ ಯುವಕರನ್ನು ಹಾಳು ಮಾಡುತ್ತಾರೆ, ಮತ್ತು ಅವರ ಆರೋಗ್ಯವನ್ನೂ ಕೂಡ ಹಾಳು ಮಾಡುತ್ತಾರೆ ಅದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ವಿಚಾರ ಮಾಡಬೇಕೆನ್ನುವ ಮಾತನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಅವರ ಹೇಳಿದ್ದರ ಬಗ್ಗೆ ಕ್ರಮವನ್ನು ಜರುಗಿಸುತ್ತೇವೆ

(4) ಪಾಲಿಟೆಕ್ನಿಕ್‌ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಮಸ್ಯೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಮೊದಲು ಲಿಸ್ಟ್‌ನಲ್ಲಿ ನನ್ನದೇ ಇದೆ ವಿದ್ಯಾರ್ಥಿಗಳ ಸಮಸ್ಯೆ ಇದೆ ಹತ್ತು ಪಾಲಿಟೆಕ್ನಿಕ್‌ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಮಸ್ಯೆ ಈಗ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಅವರು ಸರ್ಕಾರಿ ಕೋಟಾದಲ್ಲಿ ಪಾಲಿಟೆಕ್ನಿಕ್‌ನಲ್ಲಿ ಗ್ರಾಂಟನ್ನು ಕೊಟ್ಟು ಕಾಲೇಜುಗಳಿಗೆ